# ಸ್ವರ್ಣವಲ್ಲೀ ಮಠದಲ್ಲಿ ಘನ ಪಾರಾಯಣ ಆರಂಭ

ಶಿರಸಿ: ತಾಲೂಕಿನ ಶ್ರೀಸೋಂದಾ ಸ್ವರ್ಣವಲ್ಲೀ ಸಂಸ್ಥಾನದಲ್ಲಿ ಶ್ರೀಗಳವರ ದಿವ್ಯ ಸಂಕಲ್ಪ ಹಾಗೂ ಮಾರ್ಗದರ್ಶನದಲ್ಲಿ ಅನೇಕ ವೇದ ವಿದ್ವಾಂಸರಿಂದ ಸೋಮವಾರ ಬೆಳಿಗ್ಗೆಯಿಂದ ಘನ ಪಾರಾಯಣ ವಿಧ್ಯುಕ್ತವಾಗಿ ಆರಂಭಗೊಂಡಿತು.

ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮತ್ತು ಶ್ರೀ ಆನಂದ ಬೋಧೇಂದ್ರ ಸರಸ್ವತೀ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಪ್ರಧಾನವಾಗಿ ರಾಷ್ಟ್ರ ಕ್ಷೇಮ, ಲೋಕ ಕಲ್ಯಾಣ ಹಾಗೂ ಧರ್ಮ ರಕ್ಷಣೆಯ ಸಂಕಲ್ಪದೊಂದಿಗೆ ಕಾರ್ಯಕ್ರಮ ಆರಂಭಿಸಲಾಯಿತು.

ಅಪರೂಪವಾದ ಈ ಕಾರ್ಯಕ್ರಮದಲ್ಲಿ ಅನೇಕ ರಾಷ್ಟ್ರ ಮಟ್ಟದಲ್ಲಿ ಹೆಸರುಗಳಿಸಿದ ಧರ್ಮ ನಿಷ್ಠರಾದ ವೇದ ವಿದ್ವಾಂಸರು ಪಾಲ್ಗೊಂಡಿದ್ದಾರೆ. ಇಂದಿನಿಂದ ಆರಂಭಗೊಂಡು ಸತತ ಎಂಟು ದಿನಗಳ ಕಾಲ ಈ ಪಾರಾಯಣ ಸತ್ರವು ನಡೆಯಲಿದೆ. ಇಂದಿನಿಂದ ಆರಂಭವಾದ ಪಾದ ಘನಪಾರಾಯಣ ಸತ್ರಕ್ಕೆ ಬಂದು ಪಾಲ್ಗೊಂಡು ಕೃತಾರ್ಥರಾಗೋಣ. ನಮ್ಮ ದಿನ ನಿತ್ಯದ ಚಟುವಟಿಕೆಗಳಲ್ಲಿ ಅನೇಕ ಪಾಪಗಳು ಘಟಿಸುತ್ತಾ ಇರುತ್ತದೆ. ಈ ಪಾಪಗಳನ್ನು ಉಪಶಮನ ಮಾಡಿಕೊಳ್ಳಲು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರವಣ ಮಾಡುವುದರಿಂದ ಸಾಧ್ಯ. ಶ್ರೀಗಳವರ ಆಶಯವೂ ಇದೇ ಆಗಿದೆ. ವೇದ ಅಧ್ಯಯನದ ಪ್ರವೃತ್ತಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಬರುತ್ತದೆ. ಕಾರ್ಯಕ್ರಮದ ಸಂಪೂರ್ಣ ಪ್ರಯೋಜನಗಳು ಎಲ್ಲರಿಗೂ ಸಿಗುವಂತಾಗಲಿ ಎಂದು ಪಂಡಿತರು ಅಭಿಪ್ರಾಯಪಟ್ಟರು. ಬೆಳಿಗ್ಗೆ 8 ರಿಂದ 1 ಗಂಟೆಯವರೆಗೆ ಪಾರಾಯಣ, ಮಧ್ಯಾಹ್ನ 3.30 ರಿಂದ ಉಪನ್ಯಾಸ, ಸಂಜೆ 5 ರಿಂದ 7 ಗಂಟೆಯವರೆಗೆ ವರ್ಣಕ್ರಮ ಪಾರಾಯಣ ನಡೆದವು.ವೇದ ವಿದ್ವಾಂಸರಾದ ಕೊಯಮುತ್ತೂರಿನ ಆಹಿತಾಗ್ನಿ ಜಂಬೂನಾಥ ಘನಪಾಠಿ, ಯಲ್ಲಾಪುರದ ಗೋಪಾಲಕೃಷ್ಣ ಘನಪಾಠಿ, ಸಾಗರ ಸುಚೇತನ ಘನಪಾಠಿ, ಮತ್ತಿಘಟ್ಟದ ರಾಧಾಕೃಷ್ಣ ಘನಪಾಠಿ, ಶಿವಮೊಗ್ಗದ ದತ್ತಾತ್ರೇಯ ಘನಪಾಠಿ, ಗೋಕರ್ಣದ ಮಹಾಬಲೇಶ್ವರ ಘನಪಾಠಿ, ನಾಗರಾಜ ಗಾಯತ್ರೀ ಘನಪಾಠಿ, ತಿರುವಣ್ಣಾಮಲೈ ಷಡಕ್ಷರ ಘನಪಾಠಿ, ಕುಂಭಕೋಣಂ ರಾಜೀವಾಕ್ಷ ಘನಪಾಠಿ ಪಾಲ್ಗೊಂಡಿದ್ದಾರೆ.



ತಾಲೂಕಿನ ಶ್ರೀಸೋಂದಾ ಸ್ವರ್ಣವಲ್ಲೀ ಸಂಸ್ಥಾನದಲ್ಲಿ ಘನ ಪಾರಾಯಣ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಶ್ರೀ ಆನಂದ ಬೋಧೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯದಲ್ಲಿ ಆರಂಭಗೊಂಡಿತು.